ಬಿಟ್ಟಿದ್ದಳು. ಆಗವಳ ಕುತ್ತಿಗೆಯ ಸ್ನಾಯುಗಳಲ್ಲಿ ಸೆಳೆತವುಂಟಾಗಿ ನಡುಗತೊಡಗಿದ್ದಲ್ಲದೆ, ಕೋಪದ ಅಳುವಿನಿಂದಾಗಿ ಉಸಿರುಗಟ್ಟಿ ಬಿಟ್ಟಿದ್ದಳು. ನಾವಿಬ್ಬರೂ ಅವಳನ್ನು ರೂಮಿಗೆ ಸಾಗಿಸುವಷ್ಟರಲ್ಲಿ ಸಾಕು ಸಾಕಾಗಿ ಹೋಗಿತ್ತು. ಏಕೆಂದರೆ, ಸಿಟ್ಟಿನಲ್ಲಿ ಅವಳು ನಮ್ಮನ್ನು ಸಿಕ್ಕ ಸಿಕ್ಕ ಕಡೆ ಕಚ್ಚುತ್ತಿದ್ದಳು, ಒದೆಯುತ್ತಿದ್ದಳು. ಅಡಿಗೆಯವಳು ಮಾಡಿದ ತಪ್ಪಿಗಾಗಿ ಅವಳಿಗೆ ತಕ್ಕ ಶಿಕ್ಷೆ ಕೊಡುತ್ತೇವೆಂದು ಅವಳಿಗೆ ಭರವಸೆ ನೀಡಿ, ಅವಳ ಸಿಟ್ಟನ್ನು ತಮಣೆಗೊಳಿಸಿ ಹಾಗೇ ನಿದ್ದೆಗೆ ಜಾರಿಸಿದ್ದೆವು.

ಹಾಗೆ ಲೀಲ್ಯಾಳನ್ನು ರೂಮಿಗೆ ಸಾಗಿಸುವಾಗ ನಮ್ಮಿಬ್ಬರ ಕೈಗಳು ಒಂದಕ್ಕೊಂದು ತಾಗುತ್ತಿದ್ದವು. ಅದೊಂದು ಮತ್ತೇರುವ ಸ್ಪರ್ಶವಾಗಿದ್ದುದಲ್ಲದೆ, ನಮ್ಮಿಬ್ಬರೊಳಗೂ ಹೇಳಿಕೊಳ್ಳಲಾಗದಂಥ ಕೋಮಲ ಭಾವವೊಂದನ್ನು ಸ್ಫುರಿಸಿತ್ತು. ಹೊರಗೆ ಅಸಾಧ್ಯ ಮಳೆ ಸುರಿಯುತ್ತಿತ್ತು. ಆಗಾಗ ಒಳ ತೂರಿ ಬರುತ್ತಿದ್ದ ಮಿಂಚು ರೂಮಗಳ ಕತ್ತಲ ಎದೆಯನ್ನು ಮಿನುಗಿಸುತ್ತಿತ್ತು. ಸಿಡಿಲಿನ ಹೊಡೆತಕ್ಕೆ ಕಿಟಕಿಯ ಕದಗಳು ಲಟಪಟ ಸದ್ದು ಮಾಡುತ್ತಿದ್ದವು. 'ಲೀಲ್ಯಾಗೆ ಹಂಗೆ ಆಗೋಕೆ ಕಾರಣ ಆ ಗುಡುಡು ಸಿಡಿಲಿನ ಆ ದೆವ್ವ ಮಳೆ,' ಅಂದಳು ಅವಳು ಖುಷಿಯ ಪಿಸು ದನಿಯಲ್ಲಿ. ನಾವು ರೂಮಿನಿಂದ ಆಚೆ ಬಂದು ನಡುಮನೆಯ ಪ್ಯಾಸೇಜ್‌ಗೆ ಬಂದಾಗ ಅವಳು ಇದ್ದಕ್ಕಿದ್ದಂತೆ ನಿಂತು ಏನನ್ನೋ ಧ್ಯಾನಿಸತೊಡಗಿ, 'ಓಹ್, ಎಲ್ಲಿಯೋ ಬೆಂಕಿ ಹತ್ತಿಕೊಂಡಿದೆ,' ಅಂದಳು.



ನಾವು ಡೈನಿಂಗ್ ಹಾಲ್‌ಗೆ ಓಡಿ ಕಿಟಕಿ ತೆಗೆದು ನೋಡಿದೆವು. ಅಗ್ನಿಶಾಮಕ ದಳವೊಂದು ನಮ್ಮ ಮನೆಯ ಎದುರಿನ ಹೆಬ್ಬೀದಿಯಲ್ಲಿ ಗುಡುಗಿನಂಥ ಸದ್ದು ಮಾಡಿಕೊಂಡು ಹೋಗುತ್ತಿತ್ತು. ಮಳೆಯೇ ತನ್ನನ್ನು ತಾನೇ ನಿಗ್ರಹಿಸಿಕೊಂಡಂತೆ, ದಡಿ ಮಳೆಯ ಆರ್ಭಟ ಕಡಿಮೆಯಾದರೂ, ಪಾಪ್ಲರ್ ಮರಗಳ ಮೇಲೆ ಮಳೆಯ ಸುರಿತ ಚುರುಕಾಗಿಯೇ ಇತ್ತು. ಅಗ್ನಿಶಾಮಕದಳದವನ ಎಚ್ಚರಿಕೆಯ ದನಿ ಕೇಳಿಸುತ್ತಿತ್ತು. ನೀರ್ಕೊಳವೆ ಮತ್ತು ಏಣಿಗಳನ್ನು ಹೊತ್ತ ಹೊರೆ ಬಂಡಿಗಳು ಬಿರುಸಾಗಿ ಸಾಗುತ್ತಿದ್ದವು. ಅವುಗಳೊಳಗೆ ಹಿತ್ತಾಳೆಯ ಹೆಲ್ಮೆಟ್‌ಗಳನ್ನು ಧರಿಸಿದ್ದ ಅಗ್ನಿಶಾಮಕದಳದವರು ನಿಂತಿದ್ದರು. ಕುದುರೆಗೆ ಕಟ್ಟಿದ್ದ ಗಂಟೆಗಳಿಂದ ಝುಣ ಝುಣ ಸದ್ದಾಗುತ್ತಿತ್ತು. ಅನಂತರ ಸೇಂಟ್ ಜಾನ್ ವಾರಿಯರ್ಸ್ ಚರ್ಚಿನ ಗಂಟೆ ಗೋಪುರದಿಂದ ಎಚ್ಚರಿಕೆಯ ಗಂಟೆ ಮೊಳಗಿತು. ನಾವಿಬ್ಬರೂ ಕಿಟಕಿಯ ಹತ್ತಿರ ಒಟ್ಟಿಗೇ ನಿಂತು, ನೀರಿನ ತಾಜಾ ಘಮಲನ್ನು ಆಸ್ವಾದಿಸುತ್ತಾ, ಮಳೆಯಿಂದ ತೋಯ್ದಿದ್ದ ರಸ್ತೆಯನ್ನು ನೋಡುತ್ತಿದ್ದೆವು. ನೋಡುವುದಕ್ಕೆ ಮತ್ತು ಕೇಳುವುದಕ್ಕೋಸ್ಕರವೇ ಅನ್ನುವಂತೆ, ನಮ್ಮೆಲ್ಲಾ ಇಂದ್ರಿಯ ಶಕ್ತಿಗಳು ಉದ್ವೇಗದ ಇಳುಕಲಿನಲ್ಲಿ ಕುಲುಕುತ್ತಿರುವಂತೆ, ನಮ್ಮಿಬ್ಬರೊಳಗೂ ಎಂಥದೋ ಬಲವಾದ ತೊಯ್ದಾಟ ಶುರುವಾಯ್ತು. ಅದೇ ವೇಳೆಗೆ, ಕೆಂಪುಬಣ್ಣದ ದೊಡ್ಡ ಟ್ಯಾಂಕನ್ನು ಹೊತ್ತ ಕೊನೆಯ ಬಂಡಿ ದಡ ಬಡ ಸದ್ದಿನೊಂದಿಗೆ ಬಂತು. ನನ್ನ ಎದೆ ಬಡಿತ ಹೆಚ್ಚಾಗತೊಡಗಿತು. ಮೈಯೆಲ್ಲಾ ಬಿಗಿಯಾದಂಥ ಅನುಭವವಾಗತೊಡಗಿತು. ನಾನು ಚಕ್ಕನೆ ಅವಳ ಕೈ ಹಿಡಿದುಕೊಂಡು, ದೈನ್ಯ ಭಾವದಿಂದ ಅವಳನ್ನೇ ದಿಟ್ಟಿಸಿದೆ. ಅವಳು ಕೂಡಾ ಮುಖವನ್ನು ಬಿಳುಚಿಸಿಕೊಂಡು, ತುಟಿಗಳನ್ನು ಅಗಲಿಸಿ ಎದೆಯುಬ್ಬುವಂತೆ ಆಳವಾಗಿ ಉಸಿರೆಳೆದುಕೊಂಡಳು. ನನ್ನತ್ತ ನೋಡಿದ ಅವಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿದ್ದರ ಜೊತೆಗೆ, ಎಂಥದೋ ಕೋರಿಕೆಯಿತ್ತು. ಕೈಗಳಿಂದ ನಾನವಳ ಭುಜವನ್ನು ಹಿಡಿದೆ. ನನ್ನ ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ಹುಡುಗಿಯೊಬ್ಬಳ ತುಟಿಗಳ ಪರಮ ತಂಪಿನೊಳಗೆ ಲೀನವಾಗಿಹೋಗಿದ್ದೆ.

ಇದಾದ ಮೇಲೆ, ಒಂದು ದಿನವಿರಲಿ, ಒಂದು ಗಂಟೆಯೂ ಕೂಡಾ ನಾವು ದೂರವಿರುತ್ತಿರಲಿಲ್ಲ. ದಿವಾನಖಾನೆಯಲ್ಲೋ, ನೃತ್ಯದ ರೂಮಿನಲ್ಲೋ, ಪ್ಯಾಸಿಜ್ ಅಥವಾ ಅಪ್ಪನ ಓದುವ ರೂಮಿನಲ್ಲೋ